Indian Journal of History and Archaeology

ISSN (E): 2582-225X
Vol-1 Issue 1, May-June 2019, 08-13



# ಮೇಲೂರು–ಶಂಭುಲಿಂಗೇಶ್ವರ ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪ

**ಬಿ.ಸಿ.ಸುರೇಶ**

**ಬಿ.ಸಿ.ಸುರೇಶ** ಸಹಾಯಕ ಪ್ರಾಧ್ಯಾಪಕರು ಇತಿಹಾಸ ವಿಭಾಗ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಣಸೂರು

ಮೇಲೂರು ಕೃಷ್ಣರಾಜನಗರ ತಾಲೂಕಿಗೆ ಸೇರಿರುವ ಗ್ರಾಮವಾಗಿದೆ. ಇದು ಕೃಷ್ಣರಾಜನಗರದಿಂದ ಉತ್ತರಕ್ಕೆ ಸುಮಾರು 14 ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿರುವ ಶಂಭುಲಿಂಗೇಶ್ವರ ದೇವಾಲಯವು ಪ್ರಾಚೀನ ದೇವಾಲಯವಾಗಿದ್ದು, ಸಂಪೂರ್ಣವಾಗಿ ಕಣಶಿಲೆಯ ಕಲ್ಲನ್ನು ಉಪಯೋಗಿಸಿ ಈ ದೇವಾಲಯವನ್ನು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಈ ದೇವಾಲಯವನ್ನು ನಿರ್ಮಾಣ ಮಾಡಿದ ಬಗ್ಗೆ ಆಧಾರಗಳು ಅಷ್ಟಾಗಿ ಲಭ್ಯವಿಲ್ಲ. ಆದಕಾರಣ ಈ ದೇವಾಲಯದ ವಾಸ್ತು ವಿನ್ಯಾಸವನ್ನು ಗಮನಿಸಿದರೆ ಇದೊಂದು ಹೊಯ್ಸಳರ ಕಾಲದಲ್ಲಿ ನಿರ್ಮಾಣ ಮಾಡಲಾಗಿರುವಂತಹ ದೇವಾಲಯವಾಗಿರಬಹುದೆಂದು ನಂಬಲಾಗಿದೆ. ಅಲ್ಲದೆ ಇದೊಂದು ಏಕಕೂಟ ದೇವಾಲಯವಾಗಿದ್ದು ಇದರಲ್ಲಿ ಗರ್ಭಗೃಹ, ಸುಖನಾಸಿ, ನವರಂಗ, ಮುಖಮಂಟಪಗಳು ಕಾಣಬರುತ್ತವೆ. ಆದರೆ ಈ ದೇವಾಲಯವನ್ನು ಸಂಪೂರ್ಣವಾಗಿ ನಂತರದ ಕಾಲದಲ್ಲಿ ಊರಿನ ಗ್ರಾಮಸ್ಥರು ಜೀರ್ಣೋದ್ಧಾರ ಮಾಡಿದಂತೆ ಕಂಡುಬರುತ್ತದೆ.

**ಗರ್ಭಗೃಹ**

ಗರ್ಭಗೃಹವು 8ಥ8 ಅಡಿ ಉದ್ದ ಅಗಲವಾಗಿದ್ದು ಚೌಕಾಕಾರವಾಗಿದೆ. ಇದರ ಮಧ್ಯದಲ್ಲಿ ಚೌಕಾಕಾರದ ಪಾಣಿಪೀಠದ ಮೇಲೆ ಶಂಭುಲಿಂಗೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಆದರೆ ಪೀಠವನ್ನು ಗರ್ಭಗೃಹದ ಒಳಗೆ ಜಿರ್ಣೋದ್ಧಾರದ ಸಂದರ್ಭದಲ್ಲಿ ನೆಲಮಟ್ಟ ಎತ್ತರಿಸಿ ಇತ್ತೀಚೆಗೆ ಅಮೃತಶಿಲೆಯ ಕಲ್ಲುಗಳನ್ನು ಹಾಸುವಾಗ ಪೀಠವು ನೆಲಮಟ್ಟದಲ್ಲಿರುವಂತೆ ಮಾಡಲಾಗಿದೆ. ಉಳಿದಂತೆ ಗರ್ಭಗೃಹದ ಒಳಭಾಗದ ಗೋಡೆಗೆ ಅಮೃತ ಶಿಲೆಯ ಕಲ್ಲನ್ನು ಅಂಟಿಸಲಾಗಿದೆ. ಗರ್ಭಗೃಹದ ಮೇಲ್ಛಾವಣಿ ನಕ್ಷತ್ರಾಕಾರವಾಗಿದ್ದು ಇದರ ಮಧ್ಯದಲ್ಲಿ ಅರಳಿದ ಪದ್ಮ ಪುಷ್ಪವನ್ನು ಬಿಡಿಸಲಾಗಿದೆ. ಗರ್ಭಗೃಹದ ಬಾಗಿಲು ಸರಳವಾಗಿದ್ದು, ಇತ್ತೀಚೆಗೆ ಬಾಗಿಲಿನ ಪಟ್ಟಿಕೆಗಳು ಕಾಣದ ರೀತಿ ಹಿತ್ತಾಳೆಯ ತಗಡನ್ನು ಹೊದಿಸಿ ಮುಚ್ಚಲಾಗಿದೆ.

**ಸುಖನಾಸಿ**

ಸುಖನಾಸಿಯು ಗರ್ಭಗೃಹದಷ್ಟೇ ಉದ್ದ ಅಗಲವಾಗಿದ್ದು ಚೌಕಾಕಾರವಾಗಿದೆ. ಇದರಲ್ಲಿ ಯಾವುದೇ ಮೂರ್ತಿ ಶಿಲ್ಪಗಳು ಕಾಣಬರುವುದಿಲ್ಲ. ಆದರೆ ಸುಖನಾಸಿಯ ಒಳಭಾಗದಲ್ಲಿ ಪೂಜಾ ಸಾಮಾಗ್ರಿಗಳನ್ನು ಇರಿಸಲಾಗಿದೆ ಮತ್ತು ಮೇಲ್ಛಾವಣಿ ಸರಳವಾಗಿದೆ. ಸುಖನಾಸಿಯ ದ್ವಾರವು ಗರ್ಭಗೃಹದಂತೆ ಇಲ್ಲಿಯೂ ಸಹ ಹಿತ್ತಾಳೆಯ ತಗಡನ್ನು ಹೊದಿಸಿ ಮುಚ್ಚಲಾಗಿದೆ.

**ನವರಂಗ**

ನವರಂಗವು ಸುಮಾರು 25ಷ25 ಅಡಿ ಉದ್ದ ಅಗಲವಾಗಿದ್ದು ಚೌಕಾಕಾರವಾಗಿದೆ. ಇದರ ಮಧ್ಯದಲ್ಲಿ ಕಣಶಿಲೆಯ ನಾಲ್ಕು ದೃಢವಾದ ಕಂಬಗಳಿವೆ. ಇವುಗಳನ್ನು ಕಬ್ಬಿಣದ ಉಳಿಯಿಂದ ಕೆತ್ತನೆ ಮಾಡಿ ರಚಿಸಲಾಗಿದೆ. ಇವು ಚೌಕ, ಅಷ್ಟ, ಸಿಲಿಂಡರಿನಾಕಾರ, ಮೇಲ್ಭಾಗದಲ್ಲಿ ಘಟದ ಕಂಠದ ರೀತಿ ಸ್ವಲ್ಪ ಒಳಸರಿದಂತೆ ವೃತ್ತಾಕಾರವಾಗಿ ಮಾಡಿ ಅದರ ಮೇಲೆ ಗಾಲಿಯಾಕಾರದ ಬೋಧಿಗೆ ಪದ್ಮಪುಷ್ಪದ ರೀತಿ ವೃತ್ತಾಕಾರವಾಗಿ ಮತ್ತು ಚೌಕಾಕಾರವಾಗಿರುವ ಪಲಗೈ ಸರಳವಾದ ಕಪೋತವನ್ನು ಮಾಡಲಾಗಿದೆ. ನವರಂಗದ ಮೇಲ್ಛಾವಣಿಯು 9 ಅಂಕಣಗಳಿಂದ ಕೂಡಿದ್ದು ಮಧ್ಯದಲ್ಲಿ ಮಾತ್ರ ನಕ್ಷತ್ರಾಕಾರವಾಗಿರುವ ಭುವನೇಶ್ವರಿಯನ್ನು ಮಾಡಿ ಮಧ್ಯದಲ್ಲಿ ಚಪ್ಪಟೆಯಾಕಾರದ ಅರಳಿದ ಪದ್ಮಪುಷ್ಪ, ಇನ್ನುಳಿದ ಅಂಕಣಗಳೆಲ್ಲವೂ ಸರಳವಾಗಿದೆ. ನವರಂಗದ ಒಳಭಾಗದ ಭಿತ್ತಿಯ ಸುತ್ತಲೂ ಅಮೃತ ಶಿಲೆಗಳನ್ನು ಅಂಟಿಸಲಾಗಿದೆ. ನವರಂಗದ ದ್ವಾರವು ಸರಳವಾಗಿದೆ. ನವರಂಗದ ಒಳಗೆ ಅಂದರೆ ಸುಖನಾಸಿಯ ದ್ವಾರದ ಬಲಭಾಗದಲ್ಲಿ ಸುಮಾರು ಮೂರು ಅಡಿ ಎತ್ತರವಿರುವ ಗಣಪತಿಯನ್ನು ಇರಿಸಲಾಗಿದೆ. ಈ ದೇವನು ಪದ್ಮಾಸನದಲ್ಲಿ ಕುಳಿತು

ಚತುರ್ಭುಜ ಹೊಂದಿದ್ದಾನೆ. ಕೈಗಳಲ್ಲಿ ಪಾಶ, ಅಂಕುಶ, ಫಲ ಮತ್ತು ಮುರಿದ ದಂತವನ್ನು ಹಿಡಿದುಕೊಂಡಿದ್ದಾನೆ. ಪ್ರಭಾವಳಿಯಲ್ಲಿ ಬಳ್ಳಿ ಸುರಳಿಗಳಿವೆ. ಸುಖನಾಸಿಯ ದ್ವಾರದ ಎಡಭಾಗದಲ್ಲಿ ಸುಮಾರು ಮೂರುವರೆ ಅಡಿ ಎತ್ತರವಿರುವ ಸರಸ್ವತಿಯನ್ನು ಇರಿಸಲಾಗಿದೆ. ಸುಖಾಸನದಲ್ಲಿ ಕುಳಿತಿರುವ ಈ ದೇವಿಯು ಚತುರ್ಭುಜ ಹೊಂದಿದ್ದು ಕೈಗಳಲ್ಲಿ ಪಾಶ ಅಂಕುಶ ಪುಸ್ತಕ ಮತ್ತು ಜಪಮಣಿ ಹಿಡಿದಿದ್ದಾಳೆ.

**ಮುಖಮಂಟಪ**

ಮುಖಮಂಟಪವು ಆಯಾತಾಕಾರವಾಗಿದ್ದು ಚೌಕ, ಅಷ್ಟ ಮುಖಗಳನ್ನು ಹೊಂದಿರುವ ನಾಲ್ಕು ಕಂಬಗಳನ್ನು ಸಾಲಾಗಿ ನಿಲ್ಲಿಸಲಾಗಿದೆ. ಇವುಗಳ ಬೋಧಿಗೆ ಸರಳವಾಗಿದ್ದು ಮೇಲ್ಛಾವಣಿ ಸರಳವಾಗಿದೆ.

**ಅಧಿಷ್ಠಾನ**

ಈ ದೇವಾಲಯದ ಅಧಿಷ್ಠಾನವು ಸಂಪೂರ್ಣವಾಗಿ ಭೂಮಿಯಲ್ಲಿ ಮುಚ್ಚಿ ಹೋಗಿದೆ. ಇದರ ಮೇಲಿರುವ ಭಿತ್ತಿಯು ಸಹ ಸರಳವಾಗಿದ್ದು, ಕಲ್ಲಿನ ದಿಮ್ಮಿಗಳನ್ನು ಒಂದರ ಮೇಲೊಂದರಂತೆ ಇಟ್ಟು ಭಿತ್ತಿಯನ್ನು ರಚಿಸಲಾಗಿದೆ. ಇದರ ಮೇಲಿರುವ ಕಪೋತವನ್ನು ಭಿತ್ತಿಯಿಂದ ಒಂದು ಅಡಿ ಮುಂಚಾಚಿದಂತೆ ಮಾಡಿ ಇಳಿಜಾರಾಗಿರುವಂತೆ ರಚಿಸಲಾಗಿದೆ. ಇದರ ಮೇಲಿರುವ ಕೈಪಿಡಿ ಗೋಡೆಯ ಒರಭಾಗದಲ್ಲಿ ಬಳ್ಳಿ ಸುರುಳಿಗಳ, ಪದ್ಮಪುಷ್ಪಗಳ ಗಿಳಿ ಮತ್ತು ಹಂಸಗಳನ್ನು ಗಾರೆಯಿಂದ ಮಾಡಿ ದೇವಾಲಯದ ಸುತ್ತಲೂ ಅಲಂಕರಿಸಲಾಗಿದೆ. ಕೈಪಿಡಿ ಗೋಡೆಯ ಮೇಲೆ ಮೂಲೆಗಳಲ್ಲಿ ಎರಡು ದೇಹ, ಒಂದು ತಲೆಯ ನಂದಿಗಳನ್ನು ಇಟ್ಟಿಗೆ ಮತ್ತು ಗಾರೆಯಲ್ಲಿ ರಚಿಸಲಾಗಿದೆ. ದೇವಾಲಯದ ಮುಂಭಾಗದ ಮೇಲೆ ಕೀರ್ತಿಮುಖಗಳಂತೆ ಕೋಷ್ಠಗಳನ್ನು ರಚಿಸಿ ಅವುಗಳ ಒಳಭಾಗದಲ್ಲಿ ಶಿವನ ವಿವಿಧ ಮೂರ್ತಿಗಳನ್ನು ಇರಿಸಲಾಗಿದೆ.

**ಶಿಖರ**

ಗರ್ಭಗೃಹದ ಮೇಲಿರುವ ಶಿಖರವನ್ನು ಇಟ್ಟಿಗೆ ಮತ್ತು ಗಾರೆ ಉಪಯೋಗಿಸಿ ನಿರ್ಮಿಸಲಾಗಿದೆ. ಎರಡು ತಲಗಳಿಂದ ಕೂಡಿರುವ ಈ ಶಿಖರದಲ್ಲಿ ಕೋಷ್ಠಗುಡಿಗಳು ಕಂಬಗಳ ಅಲಂಕರಣ ಮಾಡಿ ಒಳಭಾಗದಲ್ಲಿ ಗಣೇಶ, ಶಿವನ ಶಿಲ್ಪಗಳನ್ನು ಇರಿಸಲಾಗಿದೆ. ಇದರ ಮೇಲೆ ಸ್ತೂಪಿಯನ್ನು ಇರಿಸಿ ಸ್ತೂಪಿಯ ನಾಲ್ಕು ದಿಕ್ಕುಗಳಲ್ಲಿಯೂ ಕೀರ್ತಿಮುಖಗಳನ್ನು ಇರಿಸಲಾಗಿದ್ದು ಮೇಲ್ಭಾಗದಲ್ಲಿ ಕಳಸ ಇರಿಸಲಾಗಿದೆ.

ಈ ದೇವಾಲಯಕ್ಕೆ ಸುತ್ತಲೂ ಗ್ರಾಮಸ್ಥರು ಹಬ್ಬ ಹರಿದಿನ ಮಾಡುವ ಸಂದರ್ಭದಲ್ಲಿ ಬಣ್ಣವನ್ನು ಲೇಪಿಸಿ ಅದರ ಮೂಲಸ್ವರೂಪವನ್ನು ಹಾಳು ಮಾಡಿದ್ದಾರೆ. ಈ ದೇವಾಲಯದ ಸುತ್ತಲೂ ಇತ್ತೀಚೆಗೆ ಇಟ್ಟಿಗೆ ಸಿಮೆಂಟ್ ಉಪಯೋಗಿಸಿ ದೇವಾಲಯದ ಸುತ್ತಲೂ ಸುಮಾರು 6 ಅಡಿ ಎತ್ತರವಿರುವ ಪ್ರಾಕಾರವನ್ನು ನಿರ್ಮಿಸಲಾಗಿದೆ. ಈ ಪ್ರಾಕಾರದ ಪೂರ್ವಭಾಗದಲ್ಲಿ ಮಹಾದ್ವಾರವನ್ನು ಮಾಡಲಾಗಿದೆ. ಈ ಮಹಾದ್ವಾರದ ಕೆಳಭಾಗವು ಚೌಕಾಕಾರವಾಗಿದ್ದು ಮಂಟಪದ ರೀತಿ ಇದೆ. ಈ ಮಹಾದ್ವಾರದ ಮೇಲೆ ಇಟ್ಟಿಗೆ ಮತ್ತು ಸಿಮೆಂಟ್ ಉಪಯೋಗಿಸಿ 3 ತಲಗಳ ಗೋಪುರವನ್ನು ನಿರ್ಮಿಸಲಾಗಿದೆ. ತಲಗಳಲ್ಲಿ ಕಂಬಗಳ ಶಿಖರ, ದ್ವಾರಪಾಲಕರು ನಂದಿಯ ಶಿಲ್ಪಗಳು ಮತ್ತು ಶಿವನ ಪರಿವಾರ ದೇವತೆಗಳ ಶಿಲ್ಪಗಳನ್ನು ಬಿಡಿಸಲಾಗಿದೆ. ಬಣ್ಣ ಲೇಪನ ಮಾಡಿರುವುದರಿಂದ ಇವುಗಳ ಲಕ್ಷಣ ಸಂಪೂರ್ಣ ಹಾಳಾಗಿವೆ. ಗೋಪುರದ ಮೇಲೆ ದೋಣೀಯಾಕಾರವಾಗಿ ಮಾಡಿ ಇದರ ಇಕ್ಕೆಲಗಳಲ್ಲಿ ಕೀರ್ತಿಮುಖ ಮಾಡಲಾಗಿದೆ. ಅಂತ್ಯದಲ್ಲಿ ಮೂರು ಕಲಶ ಇರಿಸಲಾಗಿದೆ. ಈ ದೇವಾಲಯದ ಬಲಭಾಗದಲ್ಲಿ ಒಂದು ಚೌಕಾಕಾರದ ಉತ್ಸವ ಮಂಟಪವಿದೆ. ಅಲ್ಲದೆ ಈ ದೇವಾಲಯದ ಒಳಭಾಗದಲ್ಲಿ ಬೇರೆ ಸ್ಥಳದಿಂದ ತಂದಿರಸಲಾಗಿರುವ ವೀರಗಲ್ಲಿದೆ. ಇದು ಸುಮಾರು ಆರು ಅಡಿ ಎತ್ತರವಾಗಿದ್ದು ಬಳಪದ ಕಲ್ಲನ್ನು ಉಪಯೋಗಿಸಿ ರಚಿಸಿರುವಂತಾದ ವೀರಗಲ್ಲಾಗಿದೆ. ಇದರಲ್ಲಿ ಮೂರು ದೃಶ್ಯಗಳನ್ನು ಕೆತ್ತನೆ ಮಾಡಲಾಗಿದೆ. ಕೆಳಹಂತದಲ್ಲಿ ಗುಂಪುಗಳೊಂದಿಗೆ ಸೇರಿ ಯುದ್ಧದಲ್ಲಿ ತೊಡಗಿರುವಂತೆ ಬಲಭಾಗದಲ್ಲಿ ಕುದುರೆಯನ್ನೇರಿದ ವೀರಯೋರ್ವನು ಎಡಭಾಗದಲ್ಲಿ ಕುದುರೆಯನ್ನೇರಿದ ವೀರ ಇದ್ದಾನೆ. ಇವರ ಮುಂದೆ ಭರ್ಜಿ ಹಿಡಿದು ಶತ್ರುವಿಗೆ ಇರಿಯುತ್ತಿರುವ ಮತ್ತೋರ್ವ ವೀರ, ಭರ್ಜಿಯ ಇರಿತಕ್ಕೆ ದೇಹ ಕುಗ್ಗಿಸಿರುವ ಮತ್ತೊಬ್ಬ ವೀರ ಮೇಲ್ಭಾಗದಲ್ಲಿ ಕತ್ತಿ ಗುರಾಣಿ ಹಿಡಿದಿರುವ ವೀರರಿದ್ದಾರೆ. ಹೋರಾಡಿ ಮರಣ ಹೊಂದಿದ ವೀರನನ್ನು ಎರಡನೇ ಹಂತದಲ್ಲಿ ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಮೆರವಣಿಗೆಯೊಂದಿಗೆ ದೇವಲೋಕಕ್ಕೆ ಕರೆದೊಯ್ಯುತ್ತಿರುವ ಗಂಧರ್ವ ಸ್ತ್ರೀ, ಮೇಲೆ ಶಿವಲಿಂಗ, ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವ ಪುರೋಹಿತ ಭಕ್ತರು, ವೀರಮರಣ ಹೊಂದಿದ ಪುರುಷ ಪದ್ಮಾಸನದಲ್ಲಿ ಕುಳಿತು ಧ್ಯಾನಿಸುತ್ತಿದ್ದಾನೆ. ಶಿವನ ವಾಹನ ನಂದಿ ಇದೆ ಮೇಲ್ಭಾಗದಲ್ಲಿ ಸೂರ್ಯ ಚಂದ್ರರಿದ್ದಾರೆ.

## ಛಾಯಾಚಿತ್ರಗಳು





ಶಂಭುಲಿಂಗೇಶ್ವರ ದೇವಾಲಯ

ಶಿವಲಿಂಗ





ನವರಂಗ ವೀರಗಲ್ಲು



ಪಾಶ್ವನೋಟ

**ಪರಾಮರ್ಶನ ಗ್ರಂಥಗಳು**

1. ಹಾ. ಮಾ ನಾಯಕ–ಕನ್ನಡ ವಿಷಯ ವಿಶ್ವಕೋಶ. ಪ್ರಸಾರಾಂಗ ಮೈ.ವಿ.ವಿ ಮೈಸೂರು.–1975
2. ವಿಶ್ವೇಶ್ವರ. ತೇ.ಸಿ. **ಕೃಷ್ಣರಾಜನಗರ ತಾಲೂಕು ಗ್ಯಾಸೆಟಿಯರ್,** ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 2011
3. ಅಪರ್ಣ, ಕೂ.ಸ., **ದೇವಾಲಯ ವಾಸ್ತುಶಿಲ್ಪ ಪರಿಚಯ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 1999.
4. ತಿಪ್ಪೇರುದ್ರಸ್ವಾಮಿ, ಎಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, 1968
5. ರಾಜಶೇಖರ್, ಎಸ್., **ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ,** ಸುಜಾತ ಪಬ್ಲಿಕೇಶನ್, ಧಾರವಾಡ, 1988.
6. ಶ್ರೀಕಂಠಶಾಸ್ತ್ರಿ, ಎಸ್., **ಹೊಯ್ಸಳ ವಾಸ್ತುಶಿಲ್ಪ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು, 1965.